ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರಿದ ಮುಖ್ಯ ವಿಚಾರಣೆಃ - ಶ್ರೀ.ಎಸ್.ಡಿ.ಆರ್. ವಕೀಲರಿಂದ ದೂರುದಾರರ ಪರವಾಗಿ

7. ಚೆಕ್ಕನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಆರೋಪಿ ಸಹಿಯಿನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಬ್ಯಾಂಕಿನ ಹಿಂಬರಹಗಳನ್ನು ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು. ವಕೀಲರ ಮೂಲಕ ನೀಡಿದ ಕಾನೂನು ತಿಳುವಳಿಕೆ ಪತ್ರದ ಕಚೇರಿ ಪ್ರತಿಯನ್ನು ನಿಪಿ 4 ಎಂದು ಗುರುತಿಸಲಾಯಿತು. ಅಂಚೆ ರಸೀದಿಯನ್ನು ನಿಪಿ 5 ಎಂದು ಗುರುತಿಸಲಾಯಿತು. ಅಂಚೆ ಲಕೋಟೆಯನ್ನು ನಿಪಿ 6 ಎಂದು ಗುರುತಿಸಲಾಯಿತು. ಸಹಕಾರ ಸಂಘದವರು ನನಗೆ ನೀಡಿರುವ ಅದಿಕಾರ ಪತ್ರವನ್ನು ನಿಪಿ 7 ಎಂದು ಗುರುತಿಸಲಾಯಿತು. ಪ್ರಾಮಿಸರಿ ನೋಟಿನ ದೃಡಿಕೃತ ನಕಲನ್ನು ನಿಪಿ 8 ಎಂದು ಗುರುತಿಸಲಾಯಿತು. ಕರಾರು ಪತ್ರದ ದೃಡಿಕೃತ ನಕಲನ್ನು ನಿಪಿ 9 ಎಂದು ಗುರುತಿಸಲಾಯಿತು. ರಿಸಿವಬಲ್ ಸ್ಟೇಟಸ್‌ನ ದಾಖಲಾತಿಯನ್ನು ನಿಪಿ 10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ. ವಿ.ಕೆ.ವಿ. ವಕೀಲರಿಂದ ಆರೋಪಿಯ ಪರವಾಗಿ**

8. 2013 ರಿಂದ ನಾನು ಶಾಖಾ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದೇನೆ. ಯಾವುದೇ ವ್ಯಕ್ತಿಗೆ ಸಾಲವನ್ನು ನೀಡುವಾಗ ಸಾಲಗಾರರ ಗುರುತಿನ ಚೀಟಿ, ಆಧಾರ ಕಾರ್ಡ, ಪಡಿತರ ಚೀಟಿ, ಪ್ರಾಮಿಸರಿ ನೋಟ, ಕರಾರು ಪತ್ರ ಮತ್ತು ಎರಡು ಜಾಮೀನುದಾರರನ್ನು ಪಡೆದುಕೊಳ್ಳುತ್ತೇವೆ. ಆ ಸಮಯದಲ್ಲಿ ಚೆಕ್ಕನ್ನು ಪಡೆದುಕೊಳ್ಳುವುದಿಲ್ಲ. ಮೇಲೆ ಹೇಳಿದ ಎಲ್ಲಾ ದಾಖಲಾತಿಗಳನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಹಃ ಪಡೆದುಕೊಳ್ಳಲಾಗಿದೆ. ಸಾಲವನ್ನು ಆರೋಪಿಯ ಪತಿ ಕಿಶೋರ ರವರಿಗೆ ನೀಡಿರುತ್ತೇವೆ. ನಿವೇಶನ ಖರೀದಿಸಲು ನಾವು ಸಾಲ ನೀಡಿರುತ್ತೇವೆ. ಸಾಲ ಪಡೆದಿರುವುದು ಕಿಶೋರ ಎಂದರೆ ಸರಿ. ಈ ಪ್ರಕರಣವನ್ನು ಆತನ ಪತ್ನಿ ಹಾಗೂ ಜಾಮೀನುದಾರರಾದ ಶ್ವೇತಾ ಬಂಡಾರಿಯವರ ವಿರುದ್ಧ ದಾಖಲಾಸಿದ್ದೇನೆ. ನಿವೇಶನದ ಖರೀದಿಗಾಗಿ ಸಾಲ ಪಡೆದಾಗ ನಿವೇಶನವನ್ನು ಅಡಮಾನವಾಗಿ ಇಟ್ಟುಕೊಂಡಿರುವುದಿಲ್ಲ. ನಿವೇಶನವನ್ನು ಮಾರಾಟ ಮಾಡಿದವರ ಖಾತೆಗೆ ನಾವು ಹಣವನ್ನು ವರ್ಗಾವಣೆ ಮಾಡಿರುವುದಿಲ್ಲ.

9. ಸಾಲ ಮರು ಪಾವತಿ ಮಾಡಲು ವಿಫಲರಾದ ಕಾರಣ ಸಾಲಗಾರರು ಹಾಗೂ ಇಬ್ಬರೂ ಜಾಮೀನುದಾರರಿಗೆ ನೋಟಿಸು ನೀಡಿರುತ್ತೇವೆ. ಅದಕ್ಕೆ ಅವರು ಯಾರು ಸಹಃ ಉತ್ತರ ನೀಡಿಲ್ಲ ಬದಲಾಗಿ ಆರೋಪಿ ಹಾಗೂ ಆಕೆಯ ಗಂಡ ಬಂದು ನಿಪಿ 1ರ ಚೆಕ್ಕನ್ನು ನೀಡಿರುತ್ತಾರೆ. ಆರೋಪಿಗೂ ಆಕೆಯ ಗಂಡನ ವ್ಯವಹಾರಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಆರೋಪಿಯು ನಮ್ಮ ಸಂಘದ ಸದಸ್ಯರು ಮತ್ತು ಆಕೆಯ ಗಂಡನ ಸಾಲಕ್ಕೆ ಜಾಮೀನುದಾರರು ಎಂದು ಹೇಳುತ್ತಾರೆ. ಆರೋಪಿಯೇ ಆಕೆಯ ಚೆಕ್ಕನ್ನು ನೀಡಿದ ಕಾರಣ ಮೂಲ ಸಾಲಗಾರರ ಚೆಕ್ಕನ್ನು ಕೇಳಿಲ್ಲ. ಅವರು ಚೆಕ್ಕು ನೀಡಿದಾಗ ನಾವು ರಿಜಿಸ್ಟರ ಪುಸ್ತಕದಲ್ಲಿ ಉಲ್ಲೇಖ ಮಾಡಿರುತ್ತೇವೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದು.

10. ಮನೆ ನಿವೇಶನಕ್ಕೆ ಸಾಲಕೊಟ್ಟ ಬಗ್ಗೆ ಕರಾರು ಪತ್ರ ಇರುವುದಿಲ್ಲ. ಆರೋಪಿಯು ಯಾವುದೇ ಸಾಲ ಮಾಡದೇ ಇದ್ದರು ಆಕೆಯ ವಿರುದ್ಧ ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಸಹಿ/-
ಓ.ಹೇ.ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬೆಳ್ತಂಗಡಿ